# ಜಿಲ್ಲಾಧಿಕಾರಿಗಳ ನ್ಯಾಯಾಲಯ, ಕೋಲಾರ ಜಿಲ್ಲೆ, ಕೋಲಾರ

ದಿನಾಂಕ:19/10/2016

ಪ್ರಕರಣ ಸಂಖ್ಯೆ: ಆರ್‌ಎ.45/2014-15

ಉಪಸ್ಥಿತರು: ಡಾ॥ ಕೆ.ವಿ.ತ್ರಿಲೋಕ್ ಚಂದ್ರ ಭಾ.ಆ.ಸೇ.,
ಜಿಲ್ಲಾಧಿಕಾರಿಗಳು,
ಕೋಲಾರ ಜಿಲ್ಲೆ.

| ಮೇಲ್ಮನವಿದಾರರು | ವಿರುದ್ಧ | ಎದುರುದಾರರು |
|---|---|---|
| 1. ಅಸ್ಲಾಂಪಾಷ<br>ಬಿನ್ ಅಬ್ದುಲ್‌ಸತ್ತಾರ್ ಸಾಬ್<br>ವೀರಾಪುರ ಗ್ರಾಮ<br>ವೇಮಗಲ್ ಹೋಬಳಿ<br>ಕೋಲಾರ ತಾಲ್ಲೂಕು<br>2. ಅಮೀರ್‌ಜಾನ್<br>ಬಿನ್ ರೆಹಮಾನ್ ಸಾಬಿ<br>ಹೊಂಗೇನಹಳ್ಳಿ ಗ್ರಾಮ<br>ಕಸಬಾ ಹೋಬಳಿ<br>ಮಾಲೂರು ತಾಲ್ಲೂಕು<br>( ಶ್ರೀ ಕೆ.ಎನ್.ರಮೇಶ್<br>-ವಕೀಲರು ರವರಿಂದ ) | | 1. ಸಹಾಯಕ ಕಮೀಷನರ್<br>ಕೋಲಾರ ಉಪವಿಭಾಗ<br>2. ತಹಶೀಲ್ದಾರ್<br>ಕೋಲಾರ ತಾಲ್ಲೂಕು<br>3. ಷೇಕ್ ಇಸ್ಮಾಯಿಲ್ ಸಾಬಿ<br>ಬಿನ್ ಲೇಟ್ ಷೇಕ್ ಅಲಿಸಾಬಿ<br>ವೀರಾಪುರ ಗ್ರಾಮ<br>ವೇಮಗಲ್ ಹೋಬಳಿ<br>ಕೋಲಾರ ತಾಲ್ಲೂಕು<br>( ಶ್ರೀ ಸಿ.ಆರ್.ಕೃಷ್ಣಮೂರ್ತಿ<br>-ವಕೀಲರು ರವರಿಂದ ) |

ವಿಷಯ: ಸಹಾಯಕ ಕಮೀಷನರ್ ಕೋಲಾರ ಉಪವಿಭಾಗ ರವರ ನಂ:ಆರ್‌ಎ47/2008-09 ದಿನಾಂಕ:02/09/2014 ರ ಆದೇಶದ ವಿರುದ್ಧ ಸಲ್ಲಿಸಿರುವ ಮೇಲ್ಮನವಿ.

0-0-0

ಪ್ರಸ್ತಾವನೆ.

ಈ ಮೇಲ್ಮನವಿ ಅರ್ಜಿಯನ್ನು ಕರ್ನಾಟಕ ಭೂ ಕಂದಾಯ ಅಧಿನಿಯಮ 1964 ರ ಕಲಂ 136(3) ಓದಲಾದ ಕಲಂ 50 ರಂತೆ ಸಲ್ಲಿಸಿರುತ್ತಾರೆ.

ಪ್ರಕರಣದ ಸಂಕ್ಷಿಪ್ತ ವಿವರ,

1. ಕೋಲಾರ ತಾಲ್ಲೂಕು, ವೇಮಗಲ್ ಹೋಬಳಿ ವೀರಾಪುರ ಗ್ರಾಮದ ಸ.ನಂ. 64 ಹೊಸ ಸ.ನಂ.77 ರ ಜಮೀನಿಗೆ ಸಂಬಂಧಿಸಿದಂತೆ ಹಕ್ಕು ದಾಖಲೆ ಕ್ರಮಾಂಕ:ಎಂ.ಆರ್11/2007-08 ದಿನಾಂಕ:25/01/2008 ರಂತೆ ಅಸ್ಲಾಂಪಾಷ ಬಿನ್ ಅಬ್ದುಲ್ ಸತ್ತಾರ್ ಸಾಬ್ ಮತ್ತು ಅಮೀರ್ ಜಾನ್ ಬಿನ್ ರೆಹಮಾನ್ ಸಾಬಿ ರವರಿಗೆ ಫವತಿ ವಾರಸು ಮೇರೆಗೆ ಖಾತೆ ಆಗಿದ್ದು, ಈ ಹಕ್ಕು ಬದಲಾವಣೆ ಆದೇಶದ ಕ್ರಮಬದ್ಧತೆಯನ್ನು ಪ್ರಶ್ನಿಸಿ ಷೇಕ್ ಇಸ್ಮಾಯಿಲ್ ಸಾಬಿ ಬಿನ್ ಲೇಟ್ ಷೇಕ್ ಅಲಿಸಾಬಿ ರವರು ಸಹಾಯಕ ಕಮೀಷನರ್, ಕೋಲಾರ ಉಪವಿಭಾಗ ರವರಲ್ಲಿ ಮೇಲ್ಮನವಿ ಅರ್ಜಿ ಸಲ್ಲಿಸಿದ್ದರ ಮೇರೆಗೆ ಪ್ರಕರಣವನ್ನು ದಾಖಲಿಸಿಕೊಂಡು ವಿಚಾರಣೆ ನಂತರ ಸಹಾಯಕ ಕಮೀಷನರ್, ರವರು ಪ್ರಶ್ನಿತ ಮ್ಯುಟೇಶನ್ ಆದೇಶವನ್ನು ರದ್ದುಪಡಿಸಿ

...2

4. 3ನೇ ಎದುರುದಾರರು ಸಲ್ಲಿಸಿರುವ ಲಿಖಿತ ಆಕ್ಷೇಪಣೆಯಲ್ಲಿ ಕೋಲಾರ ತಾಲ್ಲೂಕು ವೇಮಗಲ್ ಹೋಬಳಿ ವೀರಾಪುರ ಗ್ರಾಮದ ಸ.ನಂ.64 (ಹೊಸ ನಂ.77) ರಲ್ಲಿನ ವಿವಾದಿತ ಜಮೀನು ಮೂಲತಃ ದಿವಾನ್ ಸಾಬಿ ಬಿನ್ ಇಮಾಂ ಸಾಬಿ ರವರಿಗೆ ಸೇರಿದ್ದು, ಸದರಿ ಜಮೀನನ್ನು ದಿನಾಂಕ:13/07/1959 ರಂದು ದಿವಾನ್ ಸಾಬಿ ರವರು ಅಬ್ದುಲ್ ಶುಕೂರ್ ಬಿನ್ ಲೇಟ್ ಅಲಿಸಾಬಿ ರವರಿಗೆ ನೋಂದಾಯಿತ ಕ್ರಯ ಮಾಡಿಕೊಟ್ಟಿರುವರೆಂದು ತಿಳಿಸಿರುತ್ತಾರೆ. ಅಂದಿನಿಂದ 3ನೇ ಎದುರುದಾರರು ಹಾಗೂ ಅವರ ಕುಟುಂಬದವರು ದಾವಾ ಸ್ವತ್ತಿನಲ್ಲಿ ಅನುಭೋಗದಲ್ಲಿರುವರೆಂದೂ 1974 ರಲ್ಲಿ ತಮ್ಮ ಕುಟುಂಬದವರು ಅವಿಭಕ್ತ ಕುಟುಂಬದ ಆಸ್ತಿಗಳನ್ನು ವಿಭಾಗ ಮಾಡಿಕೊಂಡಾಗ 3ನೇ ಎದುರುದಾರರಿಗೆ ವಿವಾದಿತ ಜಮೀನು 'ಇ' ಷೆಡ್ಯೂಲ್‌ನಂತೆ ಬಂದಿರುವುದಾಗಿಯೂ, ಅದರಂತೆ ಸದರಿ ಜಮೀನಿನಲ್ಲಿ ತಾವೇ ಸ್ವಾಧೀನದಲ್ಲಿರುವುದಾಗಿ ನಿವೇದಿಸಿರುತ್ತಾರೆ. ಹಾಗೂ ಕ್ರಯದ ನಂತರ ತಾವುಗಳು ವಿವಾದಿತ ಜಮೀನಿನ ಖಾತೆಯನ್ನು ಬದಲಾವಣೆ ಮಾಡಿಕೊಳ್ಳದೇ ಇರುವುದನ್ನು ಮೇಲ್ಮನವಿದಾರರು ದುರುಪಯೋಗಪಡಿಸಿಕೊಂಡು ಅವರ ಹೆಸರಿಗೆ ಖಾತೆ ಮಾಡಿಸಿಕೊಂಡಿರುವುದು ಕಾನೂನುಬಾಹಿರ ಎಂದು ವಾದಿಸಿರುತ್ತಾರೆ. 3ನೇ ಎದುರುದಾರರು ಓ.ಎಸ್ 352/2014 ರಂತೆ ಸಿವಿಲ್ ನ್ಯಾಯಾಲಯದಲ್ಲಿ ಹಕ್ಕು ಘೋಷಣೆ ಹಾಗೂ ಶಾಶ್ವತ ನಿರ್ಬಂಧಕಾಜ್ಞೆ ಕೋರಿ ದಾವೆ ಹೂಡಿದ್ದು, ಪ್ರಕರಣವು ವಿಚಾರಣಾ ಹಂತದಲ್ಲಿರುವುದಾಗಿ ತಿಳಿಸಿ, ಯಾವುದೇ ನೋಂದಾಯಿತ ದಸ್ತಾವೇಜಿನಂತೆ ಖಾತೆ ಮಾಡುವುದು ಕಂದಾಯ ಅಧಿಕಾರಿಗಳ ಕರ್ತವ್ಯವಾಗಿರುತ್ತದೆ ಎಂದು ಗೌ॥ ಉಚ್ಚ ನ್ಯಾಯಾಲಯದ ಡಬ್ಲ್ಯೂಪಿ ನಂ. 14018/1997 (ಎಲ್.ಆರ್) ದಿನಾಂಕ:01/12/2005 ಮತ್ತು 2006(5)ಕೆಜೆಎಲ್285 ಮತ್ತು 2006(3) ಕೆಸಿಸಿಆರ್ 1693 ರ ಆದೇಶವನ್ನು ಉಲ್ಲೇಖಿಸುತ್ತಾ ಮೇಲ್ಮನವಿ ಅರ್ಜಿಯನ್ನು ವಜಾಕರಿಸುವಂತೆ ಕೋರಿರುತ್ತಾರೆ.

5. ಉಭಯತ್ರರ ವಾದ, ಪ್ರಶ್ನಿತ ಆದೇಶ ಹಾಗೂ ಕಡತದಲ್ಲಿ ಲಭ್ಯವಿರುವ ದಾಖಲೆಗಳನ್ನು ಪರಿಶೀಲಿಸಲಾಗಿ ಕೋಲಾರ ತಾಲ್ಲೂಕು ವೇಮಗಲ್ ಹೋಬಳಿ ವೀರಾಪುರ ಗ್ರಾಮದ ಸ.ನಂ. ಸ.ನಂ. 64 ರಲ್ಲಿ 2-00 ಎಕರೆ ಜಮೀನು ದಿವಾನ್ ಸಾಬಿ ರವರಿಗೆ ಮಂಜೂರಾಗಿದ್ದು, ದಿವಾನ್ ಸಾಬಿ ರವರು ನೋಂದಾಯಿತ ದಸ್ತಾವೇಜು ಪತ್ರ ಸಂಖ್ಯೆ:1598/59-60 ರಂತೆ ದಿನಾಂಕ:13/07/1959 ರಂದು ಅಬ್ದುಲ್ ಶುಕೂರ್ ಬಿನ್ ಲೇಟ್ ಅಲಿಸಾಬಿ ರವರಿಗೆ ಮಾರಾಟ ಮಾಡಿರುತ್ತಾರೆ. ಸದರಿ ಜಮೀನು ನೋಂದಾಯಿತ ವಿಭಾಗ ಪತ್ರ ಸಂಖ್ಯೆ: 305/74-75 ದಿನಾಂಕ:22/04/1974 ರಂತೆ 3ನೇ ಎದುರುದಾರರಿಗೆ ಭಾಗ ಬಂದಿರುತ್ತದೆ. ಅದರಂತೆ ಇವರ ಹೆಸರಿಗೆ ಸ.ನಂ. 64/ಪಿ2 ರಲ್ಲಿ 2-00 ಎಕರೆ ನಮೂದಾಗಿರುತ್ತದೆ. ಸ.ನಂ. 64 ರ ಜಮೀನು ದುರಸ್ತಾಗಿ ಹೊಸ ನಂ.77 ಆಗಿ ಇದರಲ್ಲಿ ಒಟ್ಟು 1-24 ಗುಂಟೆ ಖರಾಬು 0-12 ಗುಂಟೆ ಜಾತ 1-12 ಎಕರೆ ಆಗಿರುತ್ತದೆ. ಲಭ್ಯ ಸರ್ವೆ ದಾಖಲೆಗಳನ್ನು ಪರಿಶೀಲಿಸಲಾಗಿ ಇದರಲ್ಲಿ ಕರ್ದ ದಿವಾನ್ ಸಾಬ್ ಬಿನ್ ಇಮಾಂ ಸಾಬ್ ಕ್ರಯದಾರ ಅಬ್ದುಲ್ ಶುಕೂರ್ ಎಂದು ನಮೂದಾಗಿರುವುದು ಕಂಡುಬರುತ್ತದೆ. ಹಾಗಾಗಿ ಸ.ನಂ. 64/ಪಿ2 ಹಾಗೂ ಸ.ನಂ. 77 ರ ಜಮೀನು ಒಂದೇ ಎಂಬುದು ಸ್ಪಷ್ಟಪಡುತ್ತದೆ. ಇದನ್ನು ಮೇಲ್ಮನವಿದಾರರು ತಮ್ಮ ಲಿಖಿತ ವಾದದಲ್ಲಿ ದಿವಾನ್ ಸಾಬ್ ರವರಿಂದ ಕ್ರಯಕ್ಕೆ ಪಡೆದ ಜಮೀನು ಸ.ನಂ.64/ಪಿ2 ಆಗಿದ್ದು, ಇದರ 2-00 ಎಕರೆ ವಿಸ್ತೀರ್ಣದಲ್ಲಿ 3ನೇ ಪ್ರತಿವಾದಿಗೆ ಸಂಬಂಧಿಸಿರುತ್ತದೆ ಎಂದು ಒಪ್ಪಿಕೊಂಡಿರುತ್ತಾರೆ.

...4

ಆದೇಶಿಸಿರುತ್ತಾರೆ. ಈ ಆದೇಶದಿಂದ ಬಾದಿತರಾದ ಮೇಲ್ಮನವಿದಾರರು ಈ ನ್ಯಾಯಾಲಯದಲ್ಲಿ ಪ್ರಸ್ತುತ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ. ಪ್ರಕರಣವನ್ನು ದಾಖಲಿಸಿಕೊಂಡು ವಿಚಾರಣೆಗೆ ಹಾಜರಾಗುವಂತೆ ತಿಳಿಸಿ ಉಭಯತ್ರರಿಗೂ ನೋಟೀಸ್ ನೀಡಲಾಯಿತು, ಉಭಯತ್ರರಿಗೂ ಸಾಕಷ್ಟು ಕಾಲಾವಕಾಶ ನೀಡಿ ವಿಚಾರಣೆ ಮಾಡಿದೆ.

2. ದಿನಾಂಕ:28/10/2014 ರಂದು ಉಭಯತ್ರರ ವಕೀಲರು ಹಾಜರು 3ನೇ ಎದುರುದಾರರ ಪರವಾಗಿ ವಕೀಲರು ವಕಾಲತ್ ಸಲ್ಲಿಸಿದರು. ಉಭಯತ್ರರಿಗೂ ಆಕ್ಷೇಪಣೆಗಳನ್ನು ಸಲ್ಲಿಸಲು ಕಾಲಾವಕಾಶ ನೀಡಿ ಪ್ರಕರಣವನ್ನು ಮುಂದೂಡಲಾಯ್ತು. ದಿನಾಂಕ:01/04/2015 ರಂದು ಪ್ರಕರಣವು ವಿಚಾರಣೆಗೆ ಬಂದಾಗ ಉಭಯತ್ರರು ಹಾಜರು, 3ನೇ ಎದುರುದಾರರ ವಕೀಲರು ತಮ್ಮ ವಾದ ಮಂಡಿಸಿದರು. ದಿನಾಂಕ:12/08/2015 ರಂದು ಪ್ರಕರಣವನ್ನು ಆದೇಶಕ್ಕಾಗಿ ಕಾದಿರಿಸಲಾಯ್ತು.

3. ಮೇಲ್ಮನವಿದಾರರು ಮಂಡಿಸಿದ ಲಿಖಿತ ವಾದದಲ್ಲಿ ಕೋಲಾರ ತಾಲ್ಲೂಕು ವೇಮಗಲ್ ಹೋಬಳಿ ವೀರಾಪುರ ಗ್ರಾಮದ ಸ.ನಂ. 64 (ಹೊಸ ಸ.ನಂ.77) ರಲ್ಲಿ 1-24 ಎಕರೆ ಜಮೀನಿನ ಮೂಲ ಮಂಜೂರಿದಾರರಾದ ದಿವಾನ್ ಸಾಬಿ ಬಿನ್ ಇಮಾಂಸಾಬಿ (ಮೇಲ್ಮನವಿದಾರರ ತಾತ) ರವರಿಗೆ ಸೇರಿದ್ದು, ಇವರಿಗೆ ದಾವಾ ಸ್ವತ್ತು ಸರ್ಕಾರದಿಂದ ಮಂಜೂರಾಗಿರುತ್ತದೆ. ದಿವಾನ ಸಾಬಿ ರವರ ಜೀವಿತಾವಧಿಯಲ್ಲಿ ದಿವಾನ್ ಸಾಬಿ ಮತ್ತು ಮೇಲ್ಮನವಿದಾರರು ಸದರಿ ಜಮೀನಿನಲ್ಲಿ ಅನುಭೋಗದಲ್ಲಿರುವುದಾಗಿಯೂ ದಿವಾನ್ ಸಾಬಿ ರವರ ಮರಣಾನಂತರ ಮೇಲ್ಮನವಿದಾರರು ಫವತಿ ವಾರಸು ಮೇರೆಗೆ ಹಕ್ಕು ದಾಖಲೆ ಕ್ರಮಾಂಕ:ಎಂ.ಆರ್11/2007-08 ರಂತೆ ವಿವಾದಿತ ಜಮೀನಿನ ಖಾತೆ ಬದಲಾವಣೆ ಮಾಡಿಕೊಂಡಿರುತ್ತಾರೆ. 3ನೇ ಎದುರುದಾರರಿಗೆ ವಿವಾದಿತ ಜಮೀನಿನ ಮೇಲೆ ಯಾವುದೇ ಹಕ್ಕು ಇಲ್ಲದಿದ್ದರೂ ಮೇಲ್ಮನವಿದಾರರಿಗೆ ತೊಂದರೆ ಕೊಡುತ್ತಿರುವುದಾಗಿಯೂ, ಇವರ ವಿರುದ್ಧ ಮೇಲ್ಮನವಿದಾರರು ಮಾನ್ಯ ಪ್ರಥಮ ಅಪರ ಸಿವಿಲ್ ನ್ಯಾಯಾಧೀಶರು (ಕೆ.ವಿ) ಕೋಲಾರ ರವರಲ್ಲಿ ನಂ.ಓ.ಎಸ್68/2009 ರಂತೆ ಶಾಶ್ವತ ನಿರ್ಭಂಧಕಾಜ್ಞೆ ದಾವೆ ಹೂಡಿದ್ದು, ನ್ಯಾಯಾಲಯವು ದಿನಾಂಕ:01-03/2013 ರಂದು ಇವರ ಪರವಾಗಿ ಆದೇಶ ನೀಡಿರುತ್ತದೆಂದು, ಈ ಆದೇಶದ ವಿರುದ್ಧ 3ನೇ ಪ್ರತಿವಾದಿಯು ಮಾನ್ಯ 2ನೇ ಅಪರ ಸಿವಿಲ್ ನ್ಯಾಯಾಲಯ ನ್ಯಾಯಾಧೀಶರು (ಹಿರಿಯ ಶ್ರೇಣಿ) ಕೋಲಾರ ರವರಲ್ಲಿ ನಂ.ಅರ್‌ಎ 79/13 ರಂತೆ ದಾವೆ ಹೂಡಿದ್ದು, ನ್ಯಾಯಾಲಯವು 3ನೇ ಎದುರುದಾರರ ಪರವಾಗಿ ಆದೇಶ ಮಾಡಿರುತ್ತಾರೆ. ಈ ಆದೇಶದ ವಿರುದ್ಧ ಮೇಲ್ಮನವಿದಾರರು ಗೌ॥ ಉಚ್ಚ ನ್ಯಾಯಾಲಯ ರವರಲ್ಲಿ ನಂ.ಆರ್.ಎಸ್.ಎ820/2015 ರಲ್ಲಿ ದಾವೆ ಹೂಡಿದ್ದು, ಪ್ರಕರಣವು ವಿಚಾರಣಾ ಹಂತದಲ್ಲಿರುವುದಾಗಿ ತಿಳಿಸಿರುತ್ತಾರೆ. ಹಾಗೂ ಎದುರುದಾರರು ವಿವಾದಿತ ಜಮೀನು 1959 ರಲ್ಲಿ ದಿವಾನ್ ಸಾಬಿ ರವರಿಂದ ತಮ್ಮ ಕುಟುಂಬಕ್ಕೆ ಕ್ರಯವಾಗಿದ್ದು, ಕುಟುಂಬದ ಸ್ವತ್ತುಗಳನ್ನು ವಿಭಾಗ ಮಾಡಿಕೊಂಡಾಗ ದಾವಾ ಸ್ವತ್ತು 3ನೇ ಎದುರುದಾರರಿಗೆ ಬಂದಿರುವುದಾಗಿ ಹೇಳಿಕೆ ನೀಡಿರುತ್ತಾರೆ. ಆದರೆ 3ನೇ ಪ್ರತಿವಾದಿಗೆ 1959 ರಲ್ಲಿ ದಿವಾನ್ ಸಾಬಿ ರವರಿಂದ ಕ್ರಯವಾಗಿರುವುದು ವೀರಾಪುರ ಗ್ರಾಮದ ಸ.ನಂ.64/ಪಿ2 ರ 2-00 ಎಕರೆ ಜಮೀನಾಗಿರುತ್ತದೆಂದೂ, ಫಹಣಿ ಕಾಲಂ 10 ರಲ್ಲಿ ಎಂ.ಆರ್ ನಂ.4/1974-75 ವಿಭಾಗದ ಮೂಲಕ ಎಂದು ನಮೂದು ಇರುವುದಾಗಿ ತಿಳಿಸಿ ಸದರಿ ಫಹಣಿ ಪ್ರತಿಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ. ದಾವಾ ಸ್ವತ್ತಿಗೂ ಎದುರುದಾರರಿಗೂ ಯಾವುದೇ ಸಂಬಂಧವಿಲ್ಲವೆಂದು ವಾದಿಸಿ ಪ್ರಶ್ನಿತ ಸಹಾಯಕ ಕಮೀಷನರ್ ರವರ ಆದೇಶವನ್ನು ರದ್ದುಪಡಿಸುವ ಮೂಲಕ ತಮ್ಮ ಮೇಲ್ಮನವಿ ಅರ್ಜಿಯನ್ನು ಪುರಸ್ಕರಿಸಬೇಕೆಂದು ಕೋರಿರುತ್ತಾರೆ.

...3

ಸದರಿ ಜಮೀನು ಹಾಗೂ ವಿವಾದಿತ ಜಮೀನು ಬೇರೆ ಎಂಬುದನ್ನು ಸಾಬೀತುಪಡಿಸುವಲ್ಲಿ ಮೇಲ್ಮನವಿದಾರರು ವಿಫಲರಾಗಿರುತ್ತಾರೆ.

## ಆದೇಶ

ಮೇಲ್ಮನವಿ ಅರ್ಜಿಯನ್ನು ವಜಾಕರಿಸಿದೆ. ಕೋಲಾರ ತಾಲ್ಲೂಕು ವೇಮಗಲ್ ಹೋಬಳಿ ವೀರಾಪುರ ಗ್ರಾಮದ ಸ.ನಂ. 64/ಪಿ2 ನ್ನು ರದ್ದುಪಡಿಸಿ, ಸ.ನಂ. 77 ರಲ್ಲಿ 3ನೇ ಎದುರುದಾರರಾದ ಷೇಕ್ ಇಸ್ಮಾಯಿಲ್ ಸಾಬಿ ಬಿನ್ ಲೇಟ್ ಷೇಕ್ ಅಲಿಸಾಬಿ ರವರ ಹೆಸರನ್ನು ಇಂಡೀಕರಿಸಲು ತಹಶೀಲ್ದಾರ್, ಕೋಲಾರ ತಾಲ್ಲೂಕು ರವರಿಗೆ ನಿರ್ದೇಶಿಸಿ ಆದೇಶಿಸಿದೆ.

ಈ ಆದೇಶವನ್ನು ಶೀಘ್ರಲಿಪಿಗಾರರಿಗೆ ಉಖ್ತಲೇಖನ ನೀಡಿ, ಬೆರಳಚ್ಚು ಮಾಡಿಸಿ ಪರಿಷ್ಕರಿಸಿದೆ. ನಂತರ ದಿನಾಂಕ:19/10/2016 ರಂದು ಮುಕ್ತ ನ್ಯಾಯಾಲಯದಲ್ಲಿ ಘೋಷಿಸಿದೆ.

ಜಿಲ್ಲಾಧಿಕಾರಿಗಳು,
ಕೋಲಾರ ಜಿಲ್ಲೆ